ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 15
2.. ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್., (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 24-09-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬನ್ನೇರುಘಟ್ಟ ರಸ್ತೆಯನ್ನು 06 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಉದ್ದೇಶಿಸಿದೆಯೇ;	ಹೌದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬನ್ನೇರುಘಟ್ಟ ರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ-2015ರಂತೆ ಜೇಡಿಮರ ಜಂಕ್ಷನ್‌ನಿಂದ ಕೋಳಿಫಾರಂ ಗೇಟ್‌ವರೆಗೂ 06 ಪಥದ ಮುಖ್ಯರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ.
ಆ	ಉದ್ದೇಶಿಸಿದ್ದಲ್ಲಿ, ಕಾಮಗಾರಿಯ ಒಟ್ಟು ವಿಸ್ತೀರ್ಣ ಹಾಗೂ ಅಂದಾಜು ಮೊತ್ತವೆಷ್ಟು; (ವಿವರಗಳನ್ನು ಒದಗಿಸುವುದು)	ಬನ್ನೇರುಘಟ್ಟ ಮುಖ್ಯರಸ್ತೆಯನ್ನು ಜೇಡಿಮರ ಜಂಕ್ಷನ್‌ನಿಂದ ಕೋಳಿಫಾರಂ ಗೇಟ್‌ವರೆಗೂ ಇರುವ ಸುಮಾರು 7.40 ಕಿ.ಮೀ ಉದ್ದದ ರಸ್ತೆಯನ್ನು 45.00 ಮೀಟರ್ ಅಗಲಕ್ಕೆ ರಸ್ತೆ ವಿಸ್ತರಿಸಲು ಯೋಜನೆ ಅನುಮೋದಿಸಲ್ಪಟ್ಟಿದ್ದು, ಸದರಿ ಯೋಜನೆಯ ಅಂದಾಜು ಮೊತ್ತ ರೂ.152.50 ಕೋಟಿಗಳಾಗಿರುತ್ತದೆ.
ಇ	ಗುತ್ತಿಗೆ ಕಾಮಗಾರಿ ಪಡೆದಿರುವ ಸಂಸ್ಥೆ ಯಾವುದು; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ; ನಿಗಧಿಪಡಿಸಿರುವ ಕಾಲಮಿತಿ ಏನು?	ಬನ್ನೇರುಘಟ್ಟ ಮುಖ್ಯರಸ್ತೆಯ ಅಗಲೀಕರಣ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಮೆ॥ ಆರ್.ಕೆ.ಇನ್‌ಫ್ರಾಕಾರ್ಪ್ ಪ್ರೈವೇಟ್ ಲಿಮಿಟೆಡ್, ನಂ. 207, ಲೂಮಿನಿ ಎನ್‌ಕ್ಲೇವ್, ಪುಂಜಾಗುಟ್ಟ, ಹೈದರಾಬಾದ್-500082 ರವರಿಗೆ ನೀಡಲಾಗಿದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಟೆಂಡರ್‌ನಲ್ಲಿ ನಿಗದಿಪಡಿಸಿದ ಅವಧಿಯು 18 ತಿಂಗಳುಗಳಾಗಿರುತ್ತದೆ. ಆದರೆ, ರಸ್ತೆ ಅಗಲೀಕರಣಕ್ಕೆ ಅವಶ್ಯವಿರುವ ಖಾಸಗಿ ಸ್ವತ್ತುಗಳನ್ನು ಟಿಡಿಆರ್ ನಿಯಮಾವಳಿಯನ್ವಯ ಭೂಸ್ವಾಧೀನ ಕೈಗೊಳ್ಳಲು

		ಕ್ರಮವಹಿಸಲಾಗಿದ್ದು, ಟಿಡಿಆರ್ ಯೋಜನೆಗೆ ಹೆಚ್ಚಿನ ಭೂಮಾಲೀಕರು ಆಸಕ್ತಿಯನ್ನು ತೋರಿಸದೆ, ಹಣದ ರೂಪದಲ್ಲಿ ಭೂ ಪರಿಹಾರವನ್ನು ಕೋರುತ್ತಿರುವುದರಿಂದ ಭೂಸ್ವಾಧೀನ ಪ್ರಕ್ರಿಯಯಲ್ಲಿ ಹಿನ್ನೆಡೆ ಉಂಟಾಗಿರುತ್ತದೆ. ಭೂಸ್ವಾಧೀನದ ನಂತರ ಸದರಿ ಕಾಮಗಾರಿಯನ್ನು ದಿನಾಂಕ: 31-10-2021 ರೊಳಗೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ನಅಇ 190 ಎಂಎನ್‌ವೈ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ